## ಸಾರಾಯಿ ಅಂಗಡಿಗಳ ಪರವಾನಿಗೆ ಕುರಿತಂ

೭೨೩. ಶ್ರೀ ಆರ್ ಎನ್ ನಾಯಕ್ (ಭಟಕಳ್).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ೧೯೮೪ ರಿಂದ ಈವರೆಗೆ ಪ್ರತಿ ವರ್ಷ ಎಷ್ಟೆಷ್ಟು ಸಾರಾಯಿ ಅಂಗಡಿಗಳಿಗೆ ಪರವಾನಿಗೆ ನಡೆಸಲು ಲೈಸನ್ಸ್ ನೀಡಲಾಗಿದೆ ?

ಆ) ಈ ವರ್ಷಕ್ಕೆ ಪರವಾನಿಗೆ ಹೊಂದಿದ ಸರಾಯಿ ಅಂಗಡಿಗಳ ಸಂಖ್ಯೆ ಎಷ್ಟು ?

ಇ) ಜನಸಂಖ್ಯೆಗೆ ಅನುಗುಣವಾಗಿ ಸರಾಯಿ ಅಂಗಡಿಗಳಿಗೆ ಪರವಾನಿಗೆ ನೀಡಲಾಗುವುದೇ, ಹಾಗಿದ್ದಲ್ಲಿ ಎಷ್ಟು ಜನರಿಗೆ ಒಂದರಂತೆ ಸಾರಾಯಿ ಅಂಗಡಿಗಳಿವೆ ?

ಈ) ಸಾರಾಯಿ ಸಾಕಷ್ಟು ಸರಬರಾಜಾಗದ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆ, ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಉ) ದಿನ ಒಂದಕ್ಕೆ ಖರ್ಚಾಗುತ್ತಿರುವ ಸಾರಾಯಿ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ ಹಾಗೂ ಸಾರಾಯಿ ಹೆಚ್ಚಿಗೆ ಖರ್ಚು ಮಾಡಲು ಸರ್ಕಾರ ಯೋಚಿಸುತ್ತಿದೆಯೇ ?

ಶ್ರೀ ಹೆಚ್ ಟಿ ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ೧೯೮೪-೮೫ –೮೩೬೮
೧೯೮೫-೮೬ –೮೫೧೧
೧೯೮೬-೮೭ –೮೭೬೦

ಆ) ೮೭೬೦

ಇ) ಇಲ್ಲ.

ಈ) ಹೌದು, ಪರಿಶೀಲನೆ ನಂತರ ಅವುಗಳಲ್ಲಿ ಹೆಚ್ಚಿನವು ಆಧಾರ ರಹಿತ ದೂರುಗಳೆಂದು ಕಂಡು ಬಂದಿವೆ.

ಉ) ಇಲ್ಲ.

## ಕೆ.ಪಿ. ಎಸ್. ಸಿ. ಯಿಂದ ನಡೆದ ಗೆಜೆಟೆಡ್ ಪ್ರೊಬೇಷನರಿ ತಹಸೀಲ್ದಾರ್ ಪರೀಕ್ಷೆಯ ಬಗ್ಗೆ

೧೦೮೧. ಶ್ರೀ ಬಿ ಎಸ್, ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ನೇ ರಾಜ್ಯ ಪತ್ರಾಂಕಿತ ಪ್ರೊಬೇಷನರಿ ತಹಸೀಲ್ದಾರ್‌ರವರ ಪರೀಕ್ಷೆ ಸಂದರ್ಭದಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ನಡೆಸಿದ ಪರೀಕ್ಷೆಯಲ್ಲಿ ೧೮೪೫೫ ಮತ್ತು ೧೮೪೫೯ ಮತ್ತು ನೊಂದಣಿ ಸಂಖ್ಯೆಗಳ ಅಭ್ಯರ್ಥಿಗಳನ್ನು ಒಂದಂ ಕೇಂದ್ರದಿಂದ ಮಂತೊಂದು ಕೇಂದ್ರಕ್ಕೆ ಪರೀಕ್ಷೆ ತೆಗೆದು ಕೊಳ್ಳಲಂ ಅವಕಾಶ ಮಾಡಿಕೊಟ್ಟಿರುವುದು ನಿಜವೇ ?

ಆ) ಈ ಮೇಲ್ಕಂಡ ಇಬ್ಬರು ಸದರಿ ಹುದ್ದೆಗೆ ಆಯ್ಕೆ ಆಗಿದ್ದಾರೆಯೇ ?

ಇ) ಹಾಗಿದ್ದಲ್ಲಿ ಅವರ ಹೆಸರು ಈಗ ಹಾಲಿ ಕೆಲಸ ಮಾಡುತ್ತಿರುವ ಸ್ಥಳದ ಹೆಸರೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೫-೮೬ನೇ ಸಾಲಿನ ಗೆಜೆಟೆಡ್ ಪ್ರೊಬೇಷನರುಗಳ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳ ಪರೀಕ್ಷೆಯಲ್ಲಿ ನೋಂದಣಿ ಸಂಖ್ಯೆ ೧೮೪೫೫ ಮತ್ತು ೧೮೪೫೯ರ ಇಬ್ಬರೂ ಅಭ್ಯರ್ಥಿಗಳಿಗೆ ಪರಿವೀಕ್ಷಕರು ಆಯೋಗದ ಗಮನಕ್ಕೆ ತಾರದೇ ಉಪ ಕೇಂದ್ರ ಬದಲಾವಣೆಗೆ ಅವಕಾಶ ಮಾಡಿ ಕೊಟ್ಟಿರುವುದು ನಿಜ. ಈ ವಿಷಯದಲ್ಲಿ ಯಾವುದೇ ಅಭ್ಯರ್ಥಿಗೂ ಉಪ ಕೇಂದ್ರ ಬದಲಾವಣೆಗೆ ಅವಕಾಶ ಮಾಡಿಕೊಡಬಾರದೆಂಬ ಆಯೋಗದ ಸೂಚನೆಯನ್ನು ಇದ್ದಾಗ್ಯೂ ಸಹ, ಈ ಇಬ್ಬರು